ಅವರೊಂದಿಗೆ ಹೆಚ್ಚು ಮಾತನಾಡಲಾಗಲಿಲ್ಲ.

ನಾನು ತಿಂಡಿ ಮುಗಿಸಿ, "... ಸರಿ ಸಂಜೆ ಸಿಗುತ್ತೇನೆ" ಎಂದು ಕಚೇರಿಗೆ ಹೊರಟೆ.

ಗೊತ್ತು ಗುರಿ ಇಲ್ಲದ ವ್ಯಕ್ತಿಯೊಬ್ಬ ಸಂಬಂಧ ಹೇಳಿಕೊಂಡು ಸಹಾಯ ಮಾಡಿ ಎಂದು ಕಂಡವರ ಮನೆ ಹೊಕ್ಕು ಬೆಳಗಾಗುವುದರೊಳಗಾಗಿ ಮನೆಯನ್ನೇ ದೋಚಿಕೊಂಡು ಹೋದ ಹಲವಾರು ಘಟನೆಗಳನ್ನು ಪತ್ರಿಕೆಗಳಲ್ಲಿ ಓದಿದ್ದೇನೆ. ಈ ವ್ಯಕ್ತಿಯೂ ಹೀಗೆ ಏನಾದರೂ ಯೋಜನೆಯೊಂದಿಗೆ ನಮ್ಮ ಮನೆಹೊಕ್ಕಿರಬಹುದೇ ಎಂಬ ಯೋಚನೆ ಬಂತು. ತಕ್ಷಣ ಮನೆಗೆ ಫೋನ್ ಮಾಡಿದೆ. ಜ್ಯೋತಿಯೇ ಫೋನ್ ಎತ್ತಿಕೊಂಡಳು.

"ಆ ಮುದುಕಪ್ಪ ಈಗೇನು ಮಾಡುತ್ತಿದ್ದಾರೆ?" ಎಂದು ಕೇಳಿದೆ.

"ಅವರು ಮನೆಯಲ್ಲಿಲ್ಲ. ನೀವು ಆಫೀಸ್‌ಗೆ ಹೋದ ಅರ್ಧಗಂಟೆಗೇ ಸ್ನಾನ ತಿಂಡಿ ಮುಗಿಸಿ ಅವರು ಮನೆಯಿಂದ ಹೊರಟರು. 'ನಾನು ಸಂಜೆ ಬರುತ್ತೇನೆ, ಮಧ್ಯಾಹ್ನದ ಊಟಕ್ಕೆ ಕಾಯಬೇಡಿ' ಅಂತ ಹೇಳಿ ಹೋದವರು ಇನ್ನೂ ವಾಪಸ್ಸು ಬಂದಿಲ್ಲ."

ನನಗೆ ಸ್ವಲ್ಪ ಸಮಾಧಾನವಾಯಿತು. ಆದರೂ ಕುತೂಹಲ! ಎಲ್ಲಿಗೆ ಹೋಗಿರಬಹುದು? ಯಾಕೆ ಸಂಜೆ ಮನೆಗೆ ಮತ್ತೆ ವಾಪಸ್ಸು ಬರುವುದು?

ಸಂಜೆ ನಾನು ಮನೆಗೆ ಬಂದಾಗ ಆ ವ್ಯಕ್ತಿ ಆಗಲೇ ಬಂದಾಗಿತ್ತು. ಅವರೊಂದಿಗೆ ಚಹಾ ಸೇವಿಸುತ್ತಾ, "ಹೊರಗಡೆ ತಂಪು ಗಾಳಿ ಇದೆ; ಹಾಗೆ ಒಂದು ಸುತ್ತು ಹಾಕಿ ಬರೋಣ ಬನ್ನಿ" ಎಂದು ಅವರನ್ನು ಎಬ್ಬಿಸಿಕೊಂಡು ಬಂದೆ. ಏನೂ ಪ್ರತಿಕ್ರಿಯಿಸದೇ ನನ್ನೊಂದಿಗೆ ಎದ್ದು ಬಂದರು.

"ರೀ ಸ್ವಲ್ಪ ಇಲ್ಲಿ ಬನ್ನಿ." ಒಳಗಡೆಯಿಂದ ಹೆಂಡತಿಯ ಕರೆ ಬಂತು. "ಹೇಗೂ ಅವರೊಂದಿಗೆ ಹೋಗ್ತಿದ್ದೀರಲ್ಲ, ಅವರು ಯಾವ ಉದ್ದೇಶಕ್ಕೆ ಬಂದಿದ್ದಾರೆ, ಎಷ್ಟು ದಿವಸ ನಮ್ಮನೇಲಿ ಇರುತ್ತಾರೆ ಸರಿಯಾಗಿ ಕೇಳಿ ತಿಳಿದುಕೊಳ್ಳಿ" ಎಂದು ಸಲಹೆ ನೀಡಿದಳು.

'ಸರಿ' ಎಂದು ಕೋಲೆಬಸವನ ಹಾಗೆ ತಲೆ ಆಡಿಸಿ ಮನೆಯಿಂದ ಒಂದು ಕಿಲೋಮೀಟರಿನಷ್ಟು ದೂರವಿದ್ದ ಉದ್ಯಾನವನಕ್ಕೆ ಕರೆದುಕೊಂಡು ಬಂದೆ. ಆಯಾಸಗೊಂಡ ಅವರನ್ನು ಕಲ್ಲು ಬೆಂಚಿನ ಮೇಲೆ ಕೂರಿಸಿಕೊಂಡೆ.

"ಅಂದ ಹಾಗೆ ಉತ್ತರ ಭಾರತದ ಎಲ್ಲ ಭಾಗವನ್ನು ಸುತ್ತಾಡಿದ್ದೀರಿ. ದಕ್ಷಿಣ ಭಾರತವನ್ನೂ ಸುತ್ತಾಡಬೇಕೆಂದಿದ್ದೀರಾ?" ಕೇಳಿದೆ.

ನನ್ನ ಮಾತು ಕೇಳಿ ಮುಗುಳ್ನಗುತ್ತಿದ್ದ ಅವರ ಮುಖ ಗಂಭೀರವಾಯಿತು.

"ಇಲ್ಲ, ಬಹುಶಃ ಇಲ್ಲಿಗೇ ನನ್ನ ಪಯಣ ಮುಕ್ತಾಯವಾಗಬಹುದು."

ಅವರ ಮಾತಿನ ಅರ್ಥ ತಿಳಿಯದೆ ಗೊಂದಲಕ್ಕೊಳಗಾದೆ. ನಮ್ಮ ಮನೆಯಲ್ಲಿ ಎಷ್ಟು ದಿನ ಉಳಿದುಕೊಳ್ಳುತ್ತಾರೆ ಎಂಬುದು ತಿಳಿಯದೆ ನನ್ನ ಆತಂಕ ಹೆಚ್ಚಾಯಿತು.

"ಅಂದರೆ ಮತ್ತೆ ಮುಂಬಯಿಗೆ ವಾಪಸ್ಸಾಗುತ್ತೀರ?"

"ಹ್ಞುಂ... ದೈವ ಪ್ರೇರಣೆ ಇದ್ದರೆ..." ಚುಟುಕಾಗಿ ಹೇಳಿದರು.

ಅವರ ಮಾತು ವಿಚಿತ್ರ ಅನಿಸಿತು. ಇವರು ಯಾವ ಗುಟ್ಟನ್ನೂ ಬಿಟ್ಟುಕೊಡುವಂತೆ ಕಾಣಲಿಲ್ಲ.

"ನೀವು ನನ್ನ ತಂದೆಯ ದೊಡ್ಡಪ್ಪನ ಮಗ ಎನ್ನುತ್ತೀರಿ. ಆದರೆ, ಅವರ ಇಬ್ಬರೂ ಗಂಡು ಮಕ್ಕಳನ್ನು ನಾನು ಒಂದೆರಡು ಬಾರಿ ನೋಡಿದ್ದೇನೆ. ಯಾವ ರೀತಿ ನನಗೆ ನೀವು ದೊಡ್ಡಪ್ಪ ಆಗಬೇಕು? ಇನ್ನೆಷ್ಟು ದಿನ ನಮ್ಮ ಮನೆಯಲ್ಲಿ ಉಳಿದುಕೊಳ್ಳಲಿದ್ದೀರಿ?"

ಅಂತೂ ಮನಸ್ಸಿನಲ್ಲಿದ್ದುದನ್ನು ನೇರವಾಗಿ ಕೇಳಿಯೆ ಬಿಟ್ಟೆ.